## ಸಾಕ್ಷಾತ್ಕಾರದ ಪಥ



ಭಗವಂತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ಸತ್ಸಂಗ, ಎಂದರೆ ಭಗವದ್ಭಕ್ತರ ಸಾಧುಸತ್ಪುರುಷರ ಸಹವಾಸ ಆಗಾಗ ಮಾಡುತ್ತಿರಬೇಕು. ಮನಸ್ಸು ಹಗಲಿರುಳೂ ಸಂಸಾರದಲ್ಲೇ, ಪ್ರಾಪಂಚಿಕ ಕೆಲಸಕಾರ್ಯಗಳಲ್ಲೇ ನಿರತವಾಗಿಬಿಟ್ಟಿದ್ದರೆ ಅದು ಭಗವನ್ಮುಖಿವಾಗಲಾರದು; ಆಗಾಗ ನಿರ್ಜನ ಪ್ರದೇಶಕ್ಕೆ ಹೋಗಿ ಭಗವದ್ಧ್ಯಾನದಲ್ಲಿ ತೊಡಗುವುದು ಅತ್ಯಂತ ಆವಶ್ಯಕ. ಮೊದ ಮೊದಲು ಪದೇ ಪದೇ ನಿರ್ಜನ ಪ್ರದೇಶಕ್ಕೆ ಹೋಗಿ ಆತನ ಧ್ಯಾನ ಮಾಡದೆ ಇದ್ದರೆ ಮನಸ್ಸನ್ನು ನಿಲ್ಲಿಸುವುದು ದುಸ್ಸಾಧ್ಯ. ಗಿಡ ಇನ್ನೂ ಸಸಿಯಾಗಿರುವಾಗ ಅದರ ಸುತ್ತಲೂ ಬೇಲಿ ಕಟ್ಟಬೇಕು; ಇಲ್ಲದಿದ್ದರೆ ದನಕರುಗಳು ಆಡುಕುರಿಗಳು ತಿಂದು ನಾಶಮಾಡಿಬಿಡುತ್ತವೆ.

ಧ್ಯಾನವನ್ನು ಅಂತರ್ಯದಲ್ಲೊ, ಏಕಾಂತ ಸ್ಥಳದಲ್ಲೊ ನಿಬಿಡ ಅರಣ್ಯದಲ್ಲೊ ಮಾಡಬೇಕು. ಸತತ ಸದಸದ್ವಿಚಾರ ಮಾಡುತ್ತಿರಬೇಕು —ಭಗವಂತನೊಬ್ಬನೇ ಸತ್, ನಿತ್ಯವಸ್ತು; ಉಳಿದುದೆಲ್ಲಾ ಅಸತ್, ಅನಿತ್ಯವಸ್ತು ಎಂದು. ಹೀಗೆ ವಿಚಾರ ಮಾಡುತ್ತ ಅನಿತ್ಯ ವಸ್ತುಗಳ ಮೇಲಿನ ಅನುರಾಗವನ್ನು ಕೊನೆಗೆ ಮನಸ್ಸಿನಿಂದ ಕಿತ್ತೊಗೆಯಬೇಕು.

ಭಗವಂತನ ಧ್ಯಾನದೊಡನೆ ವಿಚಾರ ಮಾಡುವುದೂ ಅತ್ಯಂತ ಆವಶ್ಯಕ. ಕಾಮಕಾಂಚನ ಅನಿತ್ಯ. ಭಗವಂತನೆ ಏಕಮಾತ್ರ ವಸ್ತು. ಹಣದಿಂದ ಏನು ದೊರೆಯುತ್ತದೆ? ಅನ್ನಾಹಾರ, ಬಟ್ಟೆಬರೆ, ಮನೆಮಠ—ಇಷ್ಟು ಮಾತ್ರ. ಭಗವಂತನ ಸಾಕ್ಷಾತ್ಕಾರ ಎಂದಿಗೂ ದೊರೆಯದು. ಆದ್ದರಿಂದ ಹಣ ಜೀವನದ ಚರಮೋದ್ದೇಶವಾಗಲಾರದು. ಇದಕ್ಕೇ ವಿಚಾರ ಅಂತ ಹೆಸರು. ಅರ್ಥವಾಯಿತೇ?

ಸಂಸಾರದಲ್ಲಿ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ, ಎಂದರೆ ಹೆಂಡತಿ, ಮಕ್ಕಳು, ತಂದೆ, ತಾಯಿ, ಇವರೊಡನೆ ಇರು. ಅವರ ಸೇವೆ ಮಾಡು. ಅವರೆಲ್ಲಾ ನಿನ್ನ ಪರಮ ಆಪ್ತರೆಂದೇ ಕಾಣು, ಆದರೆ ಮಾತ್ರ ಅವರಾರೂ ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲಸಿರಲಿ.

ಶ್ರೀಮಂತರ ಮನೆ ದಾಸಿ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ, ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನನ ಮಕ್ಕಳು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೇ ಅಲ್ಲ, ಅವರನ್ನು ಕರೆಯುತ್ತಾಳೆ, 'ನನ್ನ ರಾಮ, ನನ್ನ ಹರಿ' ಎಂಬುದಾಗಿ. ಆದರೆ ಅವಾವುವೂ ತನ್ನವಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ.

ಆಮೆ ನೀರಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲಿದೆ ಗೊತ್ತೆ ನಿನಗೆ? ತನ್ನ ಮೊಟ್ಟೆಗಳಿರುವ ದಡದಲ್ಲಿ. ಸಂಸಾರದ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನಲ್ಲಿ ನೆಡು.

ಭಗವಂತನಲ್ಲಿ ಭಕ್ತಿ ಬೆಳೆಸಿಕೊಳ್ಳುವುದಕ್ಕೆ ಮುನ್ನ ಸಂಸಾರಕ್ಕೆ ಕಾಲಿಟ್ಟೆ ಎಂದರೆ, ಇನ್ನೂ ಅಧಿಕಾಧಿಕವಾಗಿ ಕಷ್ಟಪರಂಪರೆಗಳಿಗೆ ಈಡಾಗುವೆ. ಶೋಕ, ತಾಪ, ವಿಪತ್ತು ಇವುಗಳಿಂದ ಸಂಪೂರ್ಣ ಬೆಂದು ಬೆಂಡಾಗಿಹೋಗುವೆ. ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿಯೂ ಬೆಳೆಯುತ್ತಾ ಹೋಗುತ್ತದೆ. ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸಕಾರ್ಯಗಳಲ್ಲಿ ಕೈ ಇಡಬೇಕು.

ಅತ್ಯಂತ ವ್ಯಾಕುಲನಾಗಿ ಅತ್ತರೆ ಆತನ ದರ್ಶನ ಪಡೆಯಲು ಸಾಧ್ಯ. ಹೆಂಡತಿ ಮಕ್ಕಳಿಗಾಗಿ ಜನ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ; ಕಣ್ಣೀರ ಸಾಗರದಲ್ಲೇ ತೇಲಾಡಿಬಿಡುತ್ತಾರೆ ಹಣಕ್ಕಾಗಿ. ಆದರೆ ಭಗವಂತ ಬೇಕೆಂದು ಯಾರು ತಾನೆ ಕಣ್ಣೀರಿಡುತ್ತಾರೆ? ಸಹಜ ಕರೆಯಿಂದ ಆತನನ್ನು ಕರೆಯಬೇಕು.

ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೇ. ಬಳಿಕ ಸೂರ್ಯೋದಯ. ವ್ಯಾಕುಲತೆಯಾದನಂತರವೆ ಭಗವಂತನ ದರ್ಶನ.

ಈ ಮೂರೂ ಪ್ರೀತಿಗಳೂ ಒಟ್ಟಿಗೆ ಉಂಟಾಗುವುದಾದರೆ ಭಗವಂತ ಗೋಚರನಾಗಿ ಬಿಡುತ್ತಾನೆ—ವಿಷಯಿಗೆ ವಿಷಯಗಳ ಮೇಲಿರುವ ಪ್ರೀತಿ, ತಾಯಿಗೆ ಮಕ್ಕಳ ಮೇಲಿರುವ ಪ್ರೀತಿ, ಸತಿಗೆ ಪತಿಯ ಮೇಲಿರುವ ಪ್ರೀತಿ. ಈ ಮೂರು ಪ್ರೀತಿಗಳೂ ಯಾರಲ್ಲೆ ಆಗಲಿ ಒಟ್ಟಿಗೆ ಮೂಡುವುದಾದರೆ, ಅವುಗಳ ಜೋರಿನಿಂದ ಆತನಿಗೆ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ.

ಮುಖ್ಯಾಂಶವೇನೆಂದರೆ ಭಗವಂತನನ್ನು ಪ್ರೀತಿಸಬೇಕು—ತಾಯಿ ಮಗುವನ್ನು ಪ್ರೀತಿಸುವ ಹಾಗೆ, ಸತಿ ಪತಿಯನ್ನು ಪ್ರೀತಿಸುವ ಹಾಗೆ, ವಿಷಯಿ ವಿಷಯಗಳನ್ನು ಪ್ರೀತಿಸುವ ಹಾಗೆ. ಈ ಮೂರು ಪ್ರೀತಿಗಳನ್ನೂ, ಈ ಮೂರು ಆಕರ್ಷಣೆಗಳನ್ನೂ ಒಟ್ಟುಗೂಡಿಸಿದರೆ ಅದು ಏನಾಗುತ್ತದೊ ಅದಷ್ಟನ್ನೂ ಭಗವಂತನ ಕಡೆ ತಿರುಗಿಸುವುದಾದರೆ ಆತನ ದರ್ಶನ ದೊರೆಯುತ್ತದೆ.

ವ್ಯಾಕುಲನಾಗಿ ಆತನನ್ನು ಕರೆಯಬೇಕು. ಬೆಕ್ಕಿನ ಮರಿಗೆ ಕೇವಲ 'ಮಿಯಾವ್,ಮಿಯಾವ್' ಅಂತ ತನ್ನ ತಾಯನ್ನು ಕರೆಯುವುದೊಂದೇ ಗೊತ್ತಿರುವುದು. ತಾಯಿ ಅದನ್ನು ಎಲ್ಲಿ ಇಡುವುದೊ ಅಲ್ಲೇ ಬಿದ್ದಿರುತ್ತದೆ. ಕೆಲವು ವೇಳೆ ಅಡಿಗೆ ಮನೆಯಲ್ಲಿ,ಇನ್ನು ಕೆಲವುವೇಳೆ ನೆಲದ ಮೇಲೆ, ಮತ್ತೆ ಕೆಲವು ವೇಳೆ ಹಾಸಿಗೆಯ ಮೇಲೆ ಇಡುತ್ತದೆ. ಅದಕ್ಕೇನಾದರೂ ತೊಂದರೆ ಬಂದರೆ ಅದು ಕೇವಲ 'ಮಿಯಾವ್, ಮಿಯಾವ್' ಅಂತ ಕೂಗುತ್ತದೆ. ಅದಕ್ಕೆ ಇನ್ನು ಬೇರೆ ಏನೂ ಗೊತ್ತಿಲ್ಲ. ತಾಯಿ ಬೆಕ್ಕು ಎಲ್ಲಿದ್ದರೆ ತಾನೆ ಏನು, ಈ 'ಮಿಯಾವ್, ಮಿಯಾವ್' ಎಂಬ ಶಬ್ದವನ್ನು ಕೇಳಿದೊಡನೆಯೆ ಮರಿಯ ಹತ್ತಿರಕ್ಕೆ ಬಂದುಬಿಡುತ್ತದೆ. **ಶ್ರೀರಾಮಕೃಷ್ಣ ವಚನವೇದ** ದಿಂದ